

ಚಿತ್ರ: ಪುಷ್ಕರ್ ವಿ.

# ‘ಕ್ಯಾಮೆರಾ ಹೊರತಾಗಿ ನಾನು ಹೆಚ್ಚು ಮಾತಾಡಲ್ಲ

**‘ಹಂಬಲ್ ಪೊಲಿಟಿಶಿಯನ್ ನೋಗ್‌ರಾಜ್’, ‘ಫ್ರೆಂಚ್ ಬಿರಿಯಾನಿ’ ಸಿನಿಮಾಗಳ ಮೂಲಕ ಜನರಿಗೆ ಹಾಸ್ಯದೌತಣ ನೀಡಿದ್ದ, ‘ಮಿಸ್ಟರ್ ನಾಗ್ಸ್’ ಎಂದೇ ಜನಪ್ರಿಯವಾಗಿರುವ ನಟ, ನಿರೂಪಕ ದಾನಿಶ್ ಸೇಠ್ ಇದೀಗ ಮತ್ತೆ ನೋಗ್‌ರಾಜ್ ಆಗಿ ಕಾಣಿಸಿಕೊಳ್ಳುತ್ತಿದ್ದಾರೆ. ‘ವೂಟ್’ ಒಟಿಟಿಯಲ್ಲಿ ಪ್ರಸಾರವಾಗುತ್ತಿರುವ ‘ಹಂಬಲ್ ಪೊಲಿಟಿಶಿಯನ್ ನೋಗ್‌ರಾಜ್’ ವೆಬ್ ಸರಣಿಯಲ್ಲಿ ಅವರು ನೋಗ್‌ರಾಜ್ ಆಗಿಯೇ ರಾಜಕೀಯದ ಆಟಗಳನ್ನು ಆಡಲು ರೆಡಿಯಾಗಿದ್ದಾರೆ.**

■ **ಸುಮಲತಾ ಎನ್**

‘ಹಂಬಲ್ ಪೊಲಿಟಿಶಿಯನ್ ನೋಗ್‌ರಾಜ್’ ಸಿನಿಮಾದಲ್ಲಿನ ರಾಜಕಾರಣಿ ಪಾತ್ರ ಯಾರನ್ನು ನಗಿಸಿಲ್ಲ ಹೇಳಿ? ಆ ಸಿನಿಮಾದಲ್ಲಿ ರಾಜಕಾರಣಿಯಾಗಿ, ‘ಫ್ರೆಂಚ್ ಬಿರಿಯಾನಿ’ಯಲ್ಲಿ ಆಟೊ ಡ್ರೈವರ್ ಆಗಿ ತಮ್ಮ ಸಹಜ ನಟನೆ, ಭಾಷಾ ವೈಖರಿ, ವಿಭಿನ್ನ ಮ್ಯಾನರಿಸಂನಿಂದ ಗಮನ ಸೆಳೆದಿರುವ ನಟ ದಾನಿಶ್ ಸೇಠ್ ಈಗ ಮತ್ತೆ ರಾಜಕಾರಣಿಯ ಪೋಷಾಕು ಧರಿಸಿದ್ದಾರೆ.

ರಾಜಕಾರಣದ ಕಟುವಾಸ್ತವಗಳನ್ನು ಹಾಸ್ಯದ ಲೇಪದೊಂದಿಗೆ ನಯವಾಗಿ ದಾಟಿಸಿದ್ದ ‘ಹಂಬಲ್ ಪೊಲಿಟಿಶಿಯನ್ ನೋಗ್‌ರಾಜ್’ ಸಿನಿಮಾದ ಮುಂದುವರೆದ ಭಾಗದಂತೆ, ಅದೇ ಹೆಸರಿನ ವೆಬ್ ಸರಣಿ ಜನವರಿ 6ರಂದು ವೂಟ್ ಸೆಲೆಕ್ಟ್‌ನಲ್ಲಿ ಬಿಡುಗಡೆ ಕಂಡಿದೆ. ಈ ಬಾರಿ, ಸಿಎಂ ಗಾದಿ ಮೇಲೆ ಕಣ್ಣಿಟ್ಟ ಎಂಎಲ್‌ಎ ಏನೇನೆಲ್ಲಾ ಮಾಡಬಹುದು ಎಂಬುದನ್ನು ನಗುನಗುತ್ತಲೇ ಹೇಳಲು ಹೊರಟಿದ್ದಾರಂತೆ ನೋಗ್‌ರಾಜ್.

ಹೊಸ ವೆಬ್ ಸರಣಿ, ಅದರಲ್ಲಿನ ತಮ್ಮ ಪಾತ್ರ, ಆಸಕ್ತಿ, ಅಭಿರುಚಿ, ನಿರೂಪಣಾ ಜೀವನದ ದಾನಿಶ್ ಸೇಠ್ ‘ಸುಧಾ’ ಜೊತೆ ಮಾತನಾಡಿದ್ದಾರೆ.

◆ **‘ಹಂಬಲ್ ಪೊಲಿಟಿಶಿಯನ್ ನೋಗ್‌ರಾಜ್’ ಸಿನಿಮಾದ ರಾಜಕಾರಣಿಯೇ ಮತ್ತೆ ವೆಬ್ ಸರಣಿಯಲ್ಲೂ ಕಾಣಿಸಿಕೊಂಡಿದ್ದಾನಾ? ನೋಗ್‌ರಾಜ್ ಹೊಸ ಅವತಾರವೇನು?**

ಈ ವೆಬ್ ಸರಣಿ, ‘ಹಂಬಲ್ ಪೊಲಿಟಿಶಿಯನ್ ನೋಗ್‌ರಾಜ್’ ಸಿನಿಮಾದ ಮುಂದುವರೆದ ಭಾಗದಂತಿದೆ. ರಾಜಕೀಯ ವಿಡಂಬನೆಯೇ ಇದರ ವಸ್ತು. ರಾಜಕೀಯದ ಒಳಗೆ ಏನೇನು ನಡೆಯುತ್ತದೆ ಎನ್ನುವುದು ಯಾರಿಗೂ ಸುಲಭವಾಗಿ ತಿಳಿಯುವುದಿಲ್ಲ. ರೆಸಾರ್ಟ್ ರಾಜಕಾರಣ, ಪವರ್ ಪ್ಲೇನಂಥ ಕೆಲವು ಸಂಗತಿಗಳನ್ನಿಟ್ಟುಕೊಂಡು ಕಾಲ್ಪನಿಕವಾಗಿ ವೆಬ್ ಸರಣಿ ಕಟ್ಟಲಾಗಿದೆ. ಅಧಿಕಾರ ಮೋಹಿ ನೋಗ್‌ರಾಜ್‌ಗೆ ಈ ಬಾರಿ ಮುಖ್ಯಮಂತ್ರಿಯಾಗುವ ಆಸೆ. ಅದಕ್ಕೆ ಅವನು ಮಾಡುವ ಸರ್ಕಸ್, ಮಸಲತ್ತುಗಳೇ ಜನರಿಗೆ ಕಾಮಿಡಿ. ಯಾರು ಸಿಎಂ ಆಗುತ್ತಾರೆ ಎಂಬುದನ್ನು ವಿಡಂಬನಾತ್ಮಕವಾಗಿ ಹತ್ತು ಎಪಿಸೋಡ್‌ಗಳಲ್ಲಿ ಹಾಸ್ಯದ ಮಸಾಲೆಯೊಂದಿಗೆ ಹೇಳಲಾಗಿದೆ.

◆ **ದಾನಿಶ್ ಸೇಠ್‌ಗಿಂತ ನೋಗ್‌ರಾಜ್, ಮಿಸ್ಟರ್ ನಾಗ್ ಹೆಸರುಗಳೇ ಹೆಚ್ಚು ಚಾಲ್ತಿಯಲ್ಲಿವೆಯಲ್ಲ...**

ಕೆಲವು ಬಾರಿ ನಟನಿಗಿಂತ, ಒಂದು ಪಾತ್ರ ಹೆಚ್ಚು ಹೆಸರು ಮಾಡಿಬಿಡುತ್ತದೆ. ಅದೇ ಸೆಂಟರ್ ಆಫ್ ದಿ ಶೋ ಆಗಿಬಿಡುತ್ತದೆ. ಈ ನೋಗ್‌ರಾಜ್ ಕೂಡ ಹಾಗೆಯೇ. ಅವನೇ ಕೇಂದ್ರಬಿಂದು. ವೆಬ್ ಸರಣಿ ಮಾಡುವ ಆಲೋಚನೆ ಬಂದಾಗ ನೋಗ್‌ರಾಜ್ ಪಾತ್ರವೇ ಮೊದಲು ಹೊಳೆದದ್ದು. ಜೊತೆಗೆ ರಾಜಕೀಯ ಎಂಬುದು ಸಾರ್ವತ್ರಿಕ, ಸಾರ್ವಕಾಲಿಕ ವಿಷಯ. ಅದನ್ನು ನಗುವಾಗಿ ನಿರೂಪಿಸಲು ನೋಗ್‌ರಾಜ್ ಒಬ್ಬನೇ ಸರಿ ಎನ್ನಿಸಿತು. ಇಂಟರ್ನೆಟ್ ಕಂಟೆಂಟ್ ಸೃಷ್ಟಿ, ನಿರೂಪಣೆ ನನ್ನ ಮತ್ತೊಂದು ನೆಚ್ಚಿನ ಕೆಲಸ. ಆರ್‌ಸಿಬಿ ಇನ್‌ಸೈಡರ್ ಮಿಸ್ಟರ್ ನಾಗ್ಸ್ ಆಗಿ ಕಾಮಿಡಿ ಮಿಕ್ಸ್ ಅಂಡ್

